*ನರಸಿಂಹ ಎಂ. ಪೈ, ಹೊನ್ನಾವರ*
*ಮಚ್ಚೆಗೂ, ಹಚ್ಚೆಗೂ ಏನು ಅಂತರ?*



ಮಚ್ಚೆ ದೇಹದ್ದು, ಹಚ್ಚೆ ಮೋಹದ್ದು!

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*
*ಪಾಪಿ ಚಿರಾಯು ಎನ್ನುತ್ತಾರಲ್ಲಾ, ಯಾಕೆ ಸಾರ್?*
ಆಗಾಗ ಅವನ ಹೆಸರು ಪಾಪ್ ಅಪ್ ಆಗುವುದರಿಂದ!

*ವಿ.ಹಮೀದ್, ವಿಟ್ಲ*
*ಬಳ್ಳಿಯಂತೆ ಬಳುಕುವ ಹುಡುಗಿ ವಿವಾಹದ ನಂತರ...?*
ಬಳ್ಳಿಗಳು ಅಪ್ಪುವ ಮರ!

*ಎನ್.ಎ. ನೇಜಾರ್, ಕಲ್ಯಾಣಪುರ*
*ಪ್ರೇಮಲೋಕ ಸೃಷ್ಟಿಸಿದ ರವಿಚಂದ್ರನ್‌ರ ಮುಂದಿನ ಚಿತ್ರ ಕಿಸ್ ಕೊಡಿ ಅಂತೆ. ನಾಯಕಿ ಪಾತ್ರಕ್ಕೆ ಕಾಲ್ ಶೀಟ್ ಕೊಡ್ತೀರಾ?*
ಇನ್ನು ಮುಕ್ಕಾಲು ಶೀಟ್ ಯಾರು ಕೊಡ್ತಾರೆ?

*ಆರ್. ಮಧುಸೂದನ್, ಹಾಸನ*
*ಹುಲಿಯನ್ನು ಪಳಗಿಸುವ ರಿಂಗ್ ಮಾಸ್ಟರ್ ತನ್ನ ಹೆಂಡತಿಯನ್ನು ಪಳಗಿಸಲು ಸಾಧ್ಯವೇ?*



ಪಾಪ, ಮನೆಯಲ್ಲಿ ಏನು ಸರ್ಕಸ್ ಮಾಡಿದರೂ ಪಳಗಿಸಲಾಗದುದಕ್ಕೇ ಅವನು ಸರ್ಕಸ್ ಸೇರಿದ್ದಂತೆ!

*ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ*
*ಹೆಣ್ಣಿನ ಹೆಜ್ಜೆ ಕಂಡುಹಿಡಿಯಲಾಗುವುದಿಲ್ಲವೇಕೆ?*
ಪಾಪ, ಅವಳಿಗೆ ಪಾದ ಊರಲೂ ಆಸ್ಪದ ಕೊಡದಿರುವಾಗ ಹೆಜ್ಜೆಯ ಗುರುತು ಹೇಗೆ ಮೂಡೀತು ಬಿಡಿ.

*ಎಂ.ಎಸ್. ಸೋಮಶೇಖರ್, ಮೈಸೂರು*
*ಕರೆದರೆ ಬರುವುದಿಲ್ಲ, ಕರೆಯದಿದ್ದಾಗ ಬರುವೆ; ಹಾಗಾದರೆ ನೀನು ಯಾರು?*
ನೀವು ಕೇಳಿದಿರಿ ಅಂಕಣದ ಉತ್ತರ!

*ಕೆ.ವಿ. ಶಿವಕುಮಾರ್, ಕಾಳೀಹುಂಡಿ*
*ಜಾಹಿರಾತುಗಳ ಹಾವಳಿಯಿಂದ ಹೊರಬರಬೇಕಾದರೆ ಏನು ಮಾಡಬೇಕು?*
ಟಿವಿ ಆಫ್ ಮಾಡಬೇಕು.

*ಸವಿರವಿ, ಬಾಳೆಹೊನ್ನೂರು*
*ಶಿವ ಯಾಕೆ ಗಂಗೆಯನ್ನು ತಲೆಯ ಮೇಲೆ ಇರಿಸಿಕೊಂಡಿದ್ದಾನೆ?*
ಅವನೇನೂ ಇರಿಸಿಕೊಂಡಿಲ್ಲ; ಎರಡನೆಯ ಹೆಂಡತಿ ಕೂರುವುದೇ ತಲೆಯ ಮೇಲೆ!

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ಮದುವೆಯಾಗಿ ಸುಖವಾಗಿ ಸಂಸಾರ ಮಾಡಿಕೊಂಡಿರಬೇಕೆಂದಿದ್ದೇನೆ, ನಿಮ್ಮ ಬಳಿ ಯಾವುದಾದರೂ ಸೂತ್ರ ಇದೆಯೇ?*
ಇದೆ ಮಂಗಳಸೂತ್ರ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಮಠಾಧೀಶರೆಲ್ಲಾ ಸನ್ಯಾಸಿಗಳೆ?*
ಸಾಧ್ಯವೇ ಇಲ್ಲ; ಸನ್ಯಾಸಿ ಎಂಬುದು ಪ್ರೊಪ್ರೈಟರ್‌ಶಿಪ್; ಮಠ ಲಿಮಿಟೆಡ್ ಕಂಪೆನಿ.

*ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ಧರ್ಮವೇ ಸಿಡಿಮದ್ದಾದರೆ?*
ವಿವೇಕದ ನೀರನ್ನು ಸುರಿದು ಠುಸ್ ಎನ್ನಿಸಿ!

*ಹೆಸರು ಬೇಡ, ಮೈಸೂರು*
*ಬ್ರಾಡ್‌ಗೇಜ್‌ಗೆ ಪರಿವರ್ತಿಸಿದ ಮೀಟರ್‌ಗೇಜ್‌ಗಳನ್ನು ಮತ್ತೆ ಮೀಟರ್‌ಗೇಜ್‌ಗೆ ಪರಿವರ್ತಿಸಿದರೆ ಏನಾಗುತ್ತದೆ?*
ರೈಲ್ವೇ ಕಂಟ್ರಾಕ್ಟರ್‌ನ ಮನೆ ಉದ್ಧಾರವಾಗುತ್ತದೆ!

*ರವೀಂದ್ರ ಶಿ. ಯಡಹಳ್ಳಿ, ಬೀಳಗಿ*
*ವೈದ್ಯರ ಸಲಹೆಯನ್ನು ನಿರ್ಲಕ್ಷಿಸುವವರಿಗೆ ನಿಮ್ಮ ಸಲಹೆ ಏನು ಗುರುವರ್ಯ?*
ಶುಲ್ಕ ಉಳಿಸಲು ಹೋಗಿ ಶೋಕ ಕೊಂಡೀರಿ ಜೋಕೆ!

*ಶ್ರೀಮತಿ ಸುನಂದಮ್ಮ, ಗೌರಿಬಿದನೂರು*
*ಮಾತು ಬೆಳ್ಳಿ, ಮೌನ ಬಂಗಾರ ಅಂತಾರೆ ... ಬಂಗಾರದಂಥ ಮಾತನಾಡು ಅಂತಾರಲ್ಲಾ, ಹೇಗೆ?*
ನೀವು ಮಾತನಾಡಿದ ನಂತರ ಅಲ್ಲಿ ಸಮ್ಮತಿಯ ಮೌನ ಉರುಫ್ ಬಂಗಾರ ಹರಡುವಂತಹ ಮಾತನಾಡಿದರಾಯ್ತು!

## ಬಹುಮಾನಿತ ಪ್ರಶ್ನೆ

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಉಣಿಸುವ ಕೈಯನ್ನು ಕಚ್ಚುವ ಜನ ಒದೆಯುವ ಕಾಲನ್ನು ನೆಕ್ಕುತ್ತಾರೆ; ಏಕೆ?*
ಒದೆಯುವ ಕಾಲನ್ನು ಕಚ್ಚಲು ಹೋದರೆ ಹಲ್ಲುಗಳು ಉದುರುತ್ತವಲ್ಲಾ...!

*ಅಶ್ವಿನಿ ವಿ. ಹೆಗಡೆ, ಭೈರುಂಬೆ*
*ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ. ಆದರೆ ಮನುಷ್ಯ?*
ಇದ್ದರೆ ಆಹಾರ; ಸತ್ತರೆ ಹಾರ!

*ಕೆ. ಆರ್. ದೇಸಾಯಿ, ರಾಯಚೂರು*
*ನಮ್ಮ ಊರಿನಲ್ಲಿ ಜನ ಬಸ್ ಖಾಲಿಯಿದ್ದರೂ ಮೇಲೆ ಹತ್ತಿ ಕೂರಲು ಕಾರಣವೇನು?*
ಸುತ್ತಮುತ್ತಲಿನ ಪಕ್ಷಿನೋಟ ಪಡೆಯಲಂತೆ.

*ದೀಪಾ ವಿ. ಮಹಾಲೆ, ಸಾಂಬ್ರಾಣಿ*
*ಟಿ.ವಿ. ಮೂರ್ಖರ ಪೆಟ್ಟಿಗೆಯಾದರೆ ಮೊಬೈಲ್... ?*



ಕರ್ಣಪಿಶಾಚಿ!

*ಎನ್. ವಸಂತ ಆನಂದ್, ಬೆಂಗಳೂರು*
*ಬುದ್ಧಿವಂತರು ದಡ್ಡರೊಂದಿಗೆ ಕಿತ್ತಾಡಲು ಹಿಂಜರಿಯಲು ಕಾರಣವೇನು ಅಣ್ಣಯ್ಯಾ?*
ಜಾಣ–ಜಾಣ ಗುದ್ದಾಡಿದ್ರ ಲೋಕಕ್ಕೆ ಅನುಕೂಲ ಆಗ್ತದ, ಕ್ವಾಣ–ಕ್ವಾಣ ಗುದ್ದಾಡಿದ್ರ ಲೋಕಕ್ಕೆ ಮೋಜೆನಿಸ್ತದ, ಜಾಣ–ಕ್ವಾಣ ಗುದ್ದಾಡಿದ್ರ ಲೋಕ ಜಾಣನ್ ಮುಖಕ್ ಉಗೀತದ ಎಂದಿದ್ದರು ದ.ರಾ. ಬೇಂದ್ರೆ.

*ಮಹಾವೀರ ಕಾಸಾರ, ಚನ್ನಗಿರಿ*
*ರೈತ ಮಹಿಳೆ ಕೈ ಕುಲುಕಿ ಕಮಲ ಕೊಟ್ಟರೆ ಏನೆಂದು ಅರ್ಥೈಸಿಕೊಳ್ಳಬೇಕು?*
ಮೂರೂ ಪಕ್ಷಗಳು ಸೇರಿದ ಸಮ್ಮಿಶ್ರ ಸರ್ಕಾರ ಬಂದಿದೆಯೆಂದು!

■ ರಾಮ್